ಬಾಗಲಕೋಟ ವಿಶ್ವವಿದ್ಯಾಲಯ
(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
ಮುಧೋಳ ರಸ್ತೆ, ಜಮಖಂಡಿ-587301 ಬಾಗಲಕೋಟೆ ಜಿಲ್ಲೆ
Bagalkot University
(State Public University of Govt. of Karanataka)
Mudhol Road, Jamkhandi-587301 Dist: Bagalkote
Mail ID :bgkujkd@gmail.com
Website: https://bgku.ac.in
ಕುಲಸಚಿವರ ಕಾರ್ಯಾಲಯ
Tel No: (08353)295123, 295124

BGKUJ/RO/2024-25/825

Date: 07.11.2024

## ಸುತ್ತೋಲೆ

**ವಿಷಯ:** 2024-25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಯ ಪ್ರಥಮ ಸೆಮಿಸ್ಟರಗೆ ಆಡಳಿತ ಮಂಡಳಿ (Management Quota) ಕೋಟಾದಡಿಯಲ್ಲಿ ಪ್ರವೇಶಾತಿ ಪಡೆಯುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 07.11.2024

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ಬಾಗಲಕೋಟ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬಾಗಲಕೋಟ ಜಿಲ್ಲೆಗಳ ಸಂಯೋಜಿತ ಸ್ನಾತಕೋತ್ತರ ಪದವಿ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, 2024-25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಯ ಪ್ರಥಮ ಸೆಮಿಸ್ಟರಗೆ ಆಡಳಿತಮಂಡಳಿ (Management Quota) ಕೋಟಾದಡಿಯಲ್ಲಿ ವಿಶ್ವವಿದ್ಯಾಲಯದ ನಿಯಾಮಳಿಗಳಂತೆ ದಿನಾಂಕ: 07-11-2024 ರಿಂದ 19-11-2024 ರವರೆಗೆ UUCMS ತಂತ್ರಾಂಶದ ಮೂಲಕ ಪ್ರವೇಶಾತಿಯನ್ನು ಪಡೆದುಕೊಳ್ಳುವುದು ಹಾಗೂ ಸಂಬಂಧಿಸಿದ ವಿಷಯಗಳ ಪ್ರವೇಶಾತಿ ಶುಲ್ಕಗಳನ್ನು Online (UPI/Debit/Credit Card) ಮೂಲಕ ಸಂದಾಯ ಮಾಡಲು ತಿಳಿಸಲಾಗಿದೆ.

### ಪ್ರವೇಶಾತಿಯಲ್ಲಿ ಅನುಸರಿಸಬೇಕಾದ ಸೂಚನೆಗಳು:

1. 2024-25ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕ್ರಿಯೆ ಮತ್ತು ಶೈಕ್ಷಣಿಕ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ವಿಶ್ವವಿದ್ಯಾಲಯವು ನಿಗದಿಪಡಿಸಿದ ಶೈಕ್ಷಣಿಕ ವೇಳಾಪಟ್ಟಿಯಂತೆಯೇ ಜರುಗಿಸಬೇಕು ಹಾಗೂ ವಿಶ್ವವಿದ್ಯಾಲಯವು ನಿಗದಿಪಡಿಸಿದ ಪ್ರವೇಶಾತಿ ಮಿತಿಯೊಳಗೆ ಪ್ರವೇಶ ಪಡೆಯಬೇಕು.
2. ಸ್ನಾತಕೋತ್ತರ ಕೋರ್ಸಗಳಿಗೆ ಪ್ರವೇಶ ಪಡೆಯಲು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಅಥವಾ ಯುಜಿಸಿಯಿಂದ ಮಾನ್ಯತೆ ಪಡೆದ ಯಾವುದೇ ಇತರ ವಿಶ್ವವಿದ್ಯಾಲಯಗಳಿಂದ ಮೂರು ವರ್ಷದ ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರ ಬೇಕು. ಆಯಾ ವಿಷಯಗಳಲ್ಲಿ ಐಚ್ಛಿಕ/ ಪ್ರಮುಖ/ ವಿಶೇಷ/ ಮುಖ್ಯವಿಷಯ/ ಮೂಲಭೂತ ಹಾಗೂ ಎಲ್ಲಾ ವಿಷಯಗಳಲ್ಲಿ ಒಟ್ಟಾರೆಯಾಗಿ ಕನಿಷ್ಠ 40% ಅಂಕಗಳನ್ನು ಮತ್ತು ಕಾಗ್ನೇಟ್ ವಿಷಯದಲ್ಲಿ 50% (ಪಜಾ/ ಪಪಂ/ ಪ್ರವರ್ಗ-1 ಅಭ್ಯರ್ಥಿಗಳಿಗೆ 45%) ಅಂಕಗಳನ್ನು ಪಡೆದಿದ್ದರೆ ಸ್ನಾತಕೋತ್ತರ ವಿಭಾಗಗಳಿಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಕೋರ್ಸುವಾರು ನಿಗದಿಪಡಿಸಿದ ಅರ್ಹತಾ ನಿಯಮಗಳ ಕೈಪಿಡಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ (www.bgku.ac.in) ನೋಡುವುದು ಹಾಗೂ ನಿಯಮಗಳಂತೆ ಪ್ರವೇಶಾತಿಯನ್ನು ಪಡೆದುಕೊಳ್ಳುವುದು.
3. ಸದರಿ ಪ್ರವೇಶಾತಿ ಪ್ರಕ್ರಿಯೆ ಸಂದರ್ಭದಲ್ಲಿ ಕಡ್ಡಾಯವಾಗಿ ಮೂಲ ಅಂಕಪಟ್ಟಿಗಳನ್ನು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿಕೊಂಡ ನಂತರ ಪ್ರವೇಶಾತಿಯನ್ನು ನೀಡುವುದು ಹಾಗೂ ವಿಶ್ವವಿದ್ಯಾಲಯವು ಪ್ರಕಟಿಸಿದ ಪ್ರವೇಶಾತಿ ಶುಲ್ಕಗಳಂತೆ ಮಾತ್ರ ವಿದ್ಯಾರ್ಥಿಗಳಿಂದ ನಿಗದಿತ ದಿನಾಂಕ ದೊಳಗೆ ಶುಲ್ಕ ಸ್ವೀಕರಿಸಿಕೊಳ್ಳಬೇಕು.
4. ಪ್ರವೇಶಾತಿ ಅಧಿಸೂಚನೆ ಹೊರಡಿಸಿದ ನಿಕಟ ಪೂರ್ವಸಂದರ್ಭದಲ್ಲಿ ಪದವಿ ಫಲಿತಾಂಶ ಪ್ರಕಟಗೊಂಡಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಸಂಬಂಧ ಪಟ್ಟಮ ಹಾವಿದ್ಯಾಲಯದ ಪ್ರಾಚಾರ್ಯರು / ವಿಶ್ವವಿದ್ಯಾಲಯವು ಉತ್ತೀರ್ಣರಾಗಿರುವ ಕುರಿತು **ದೃಢೀಕರಿಸಿದ** ಫಲಿತಾಂಶ ಪ್ರಕಟಿಸಿದ ಹಾಳೆಯನ್ನು (**Result Sheet**) ಕಡ್ಡಾಯವಾಗಿ ಸ್ವೀಕರಿಸಿಕೊಳ್ಳುವುದು ಹಾಗೂ ಆರುತಿಂಗಳೊಳಗೆ ಮೂಲ ಅಂಕಪಟ್ಟಿಗಳನ್ನು ಪರಿಶೀಲಿಸಿಕೊಂಡು ಸ್ವೀಕರಿಸಿಕೊಂಡು ಒಂದು ಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ಕಡ್ಡಾಯವಾಗಿ ಸಲ್ಲಿಸುವುದು.
5. **ಅಭ್ಯರ್ಥಿಗಳು ಸಲ್ಲಿಸಿದ ಮೂಲ ಪದವಿ ಅಂಕಪಟ್ಟಿ ಹಾಗೂ ದಾಖಲೆಗಳು, ನಕಲು ಅಥವಾ ತಿದ್ದುಪಡಿಯಾಗಿರುವ ಅಥವಾ ಸುಳ್ಳು ಪದವಿ ಅಂಕಪಟ್ಟಿಗಳ ಹಾಗೂ ದಾಖಲೆಗಳ ಕುರಿತು ತುಂಬಾ ಎಚ್ಚರಿಕೆಯಿಂದ ಪರಿಶೀಲಿಸಿ ಕೊಂಡ ನಂತರ ಮುಂದಿನ ಕ್ರಮ ಕೈಗೊಳ್ಳುವುದು. ಒಂದು ವೇಳೆ ಸುಳ್ಳು ಅಂಕಪಟ್ಟಿಗಳಿಗೆ ಹಾಗೂ ಖೊಟ್ಟಿ ದಾಖಲೆಗಳನ್ನು ಪಡೆದು ಕೊಂಡು ಪ್ರವೇಶಾತಿ ನೀಡಿದ್ದು ಕಂಡು ಬಂದಲ್ಲಿ ಸಂಬಂಧಪಟ್ಟ ಮಹಾವಿದ್ಯಾಲಯಗಳ ಹೊಣೆಗಾರರು ಹಾಗೂ ಅಂತಂಹ ಮಹಾವಿದ್ಯಾಲಯ ಮತ್ತು ವಿದ್ಯಾರ್ಥಿಗಳ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.**

6. ಕರ್ನಾಟಕ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿ, UGC ಯಿಂದ ಮಾನ್ಯತೆ ಹೊಂದಿದ ಕರ್ನಾಟಕದ ವಿಶ್ವವಿದ್ಯಾಲಯಗಳು ಹಾಗೂ ಕರ್ನಾಟಕೇತರ ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ಪ್ರವೇಶಾತಿ ಪ್ರಕ್ರಿಯೆಗೆ ಆಯ್ಕೆಯಾದ (Other University Candidates) ಅಭ್ಯರ್ಥಿಗಳು ಮಾತ್ರ ಅರ್ಹತಾ ಪ್ರಮಾಣಪತ್ರಗಳನ್ನು (Eligibility Certificate) ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗದಿಂದ ಪ್ರವೇಶ ಪ್ರಕ್ರಿಯೆಯ ಮುಂಚಿತವಾಗಿ ಕಡ್ಡಾಯವಾಗಿ ಪಡೆದುಕೊಂಡು, ಪ್ರವೇಶಗಳನ್ನು ಪಡೆದುಕೊಳ್ಳಬೇಕು. ಒಂದು ವೇಳೆ ಅರ್ಹತಾ ಪ್ರಮಾಣ ಪತ್ರ ಪಡೆಯುವ ಅಭ್ಯರ್ಥಿಗಳ ಪದವಿ ಅಂಕಪಟ್ಟಿಗಳಿಗೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯಕ್ಕೆ ಅನುಮಾನ ಬಂದಲ್ಲಿ ವಿಶ್ವವಿದ್ಯಾಲಯವು ಸಂಬಂಧಿಸಿದ ವಿಶ್ವವಿದ್ಯಾಲಯಕ್ಕೆ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು ನೈಜತೆ ಪರಿಶೀಲನೆಗೆ ಕಳುಹಿಸಿಕೊಡಲಾಗುವುದು ಹಾಗೂ ಅಂತಹ ಪದವಿ ಅಂಕಪಟ್ಟಿಗಳ ನೈಜತೆ ಪರಿಶೀಲನೆಗೆ ಸಂಬಂಧಿಸಿದ ವಿವಿಧ ವಿಶ್ವವಿದ್ಯಾಲಯಗಳ ನಿಗದಿಪಡಿಸಿರುವ ನೈಜತೆ ಪ್ರಮಾಣ ಪತ್ರದ ಶುಲ್ಕಗಳನ್ನು (ಅರ್ಹತಾ ಪ್ರಮಾಣ ಪತ್ರ ಶುಲ್ಕ ಹೊರತು ಪಡಿಸಿ) ಸದರಿ ಅಭ್ಯರ್ಥಿಗಳೇಭರಿಸಬೇಕು. ಪದವಿ ಅಂಕಪಟ್ಟಿಗಳ ನೈಜತೆ ಕುರಿತು ಪರಿಶೀಲನೆ ಪ್ರಮಾಣ ಪತ್ರ ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ಬಂದ ನಂತರ ಸದರಿ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. **ಒಂದು ವೇಳೆ ಪದವಿ ಅಂಕಪಟ್ಟಿಗಳು ನಕಲು ಅಥವಾ ತಿದ್ದುಪಡಿಯಾಗಿರುವ ಅಥವಾ ಸುಳ್ಳು ಪದವಿ ಅಂಕಪಟ್ಟಿಗಳನ್ನು ಸಲ್ಲಿಸಿರುವುದು ಕಂಡುಬಂದಲ್ಲಿ ಸಂಬಂಧಿಸಿದ ಅಭ್ಯರ್ಥಿಗಳ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.**
7. ಮಹಾವಿದ್ಯಾಲಯದವರು UUCMS ತಂತ್ರಾಂಶದಲ್ಲಿ ವಿದ್ಯಾರ್ಥಿಗಳು ಹೆಸರುಗಳನ್ನು **Aadhar Card** ದಲ್ಲಿ ಇರುವ ಹಾಗೆ ಸರಿಯಾಗಿ ಭರ್ತಿ ಮಾಡುವಂತೆ ಕ್ರಮ ವಹಿಸುವುದು. ಒಂದು ವೇಳೆ ಹೆಸರುಗಳನ್ನು ತಪ್ಪು ಭರ್ತಿಮಾಡಿದ್ದಲ್ಲಿ ಮುಂದಿನ ಎಲ್ಲ ಆಗು ಹೋಗುಗಳಿಗೆ ಅಭ್ಯರ್ಥಿಗಳು ಹಾಗೂ ಮಹಾವಿದ್ಯಾಲಯದವರೇ ನೇರ ಜವಾಬ್ದಾರರಾಗಿರುತ್ತಾರೆ.
8. **ಪ್ರವೇಶ ಪಡೆದ ವಿದ್ಯಾರ್ಥಿಯು ಶೇಕಡಾ 75% ರಷ್ಟು ಪ್ರತಿ ಸೆಮಿಸ್ಟರಗೆ ಹಾಜರಾತಿಯನ್ನು ಪೂರೈಸುವುದು ಕಡ್ಡಾಯವಾಗಿರುವುದರಿಂದ ವಿದ್ಯಾರ್ಥಿಗಳು ನಿಯಮಿತವಾಗಿ ತರಗತಿಗಳಿಗೆ ಹಾಜರಿವಂತೆ ಕ್ರಮವಹಿಸುವುದು. ಒಂದು ವೇಳೆ ನಿಯಮಿತ ತರಗತಿಗಳಿಗೆ ಹಾಜರಾಗದೇ ಶೇಕಡಾ 75% ರಷ್ಟು ಹಾಜರಾತಿಯನ್ನು ನೀಡಿರುವುದು ಕಂಡುಬಂದಲ್ಲಿ ಸಂಬಂಧಪಟ್ಟ ಮಹಾವಿದ್ಯಾಲಯಗಳ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.**
9. ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಮತ್ತು ಇತರೆ ಮಾಹಿತಿಗಳನ್ನು www.bgku.ac.in ವೆಬ್‌ಸೈಟ್‌ನಲ್ಲಿ ನೋಡುವುದು.
10. UUCMS ತಂತ್ರಾಂಶದಲ್ಲಿ ಯಾವುದಾದರೂ ತಾಂತ್ರಿಕ ಸಮಸ್ಯೆಗಳಿದ್ದರೆ ಸಹಾಯವಾಣಿ ನಂ: 08353-295124 ವನ್ನು ಸಂಪರ್ಕಿಸ ಬಹುದು.

**ಕುಲಸಚಿವರು**
ಬಾಗಲಕೋಟ ವಿಶ್ವವಿದ್ಯಾಲಯ
(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
ಜಮಖಂಡಿ-587301, ಜಿ. ಬಾಗಲಕೋಟ.

**ಇವರಿಗೆ,**

- ಪ್ರಾಚಾರ್ಯರು, ಸಂಯೋಜಿತ ಸ್ನಾತಕೋತ್ತರ ಪದವಿ ಮಹಾವಿದ್ಯಾಲಯಗಳು, ಬಾಗಲಕೋಟ ಜಿಲ್ಲೆ.

**ಅರ್ಹತಾ ಪ್ರಮಾಣ ಪತ್ರ ಪಡೆಯಲು ಈ ಕೆಳಗಿನ ದಾಖಲೆಗಳು ಕಡ್ಡಾಯವಾಗಿರುತ್ತವೆ.**

1. 10 ಮತ್ತು 12ನೇ ತರಗತಿಯ ಹಾಗೂ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಪಡೆದ ಎಲ್ಲ ಅಂಕಪಟ್ಟಿಗಳ ದೃಢೀಕರಿಸಿದ ಪ್ರತಿ.
2. ಗುರುತಿನ ಚೀಟಿ ಗಾತ್ರದ ಒಂದು ಭಾವಚಿತ್ರ (Identity Card Size One Photo)
3. ಅಭ್ಯರ್ಥಿಗಳು ಸಲ್ಲಿ ಸಿದ ಸ್ನಾತಕ/ಪದವಿ ಅಂಕಪಟ್ಟಿಗಳು ವಿಶ್ವವಿದ್ಯಾಲಯಕ್ಕೆ ಸಂಶಯಾಸ್ಪದ ಎಂದು ಕಂಡು ಬಂದಲ್ಲಿ, ಅಂತಹ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿಗೆ ನೈಜತೆ ಪರಿಶೀಲನೆಗಾಗಿ ಕಳುಹಿಸಿಕೊಡಲಾಗುವುದು ಹಾಗೂ ಸದರಿ ವಿಶ್ವವಿದ್ಯಾಲಯದಿಂದ ನೈಜತೆ ಧೃಡೀಕರಣ ಬಂದಲ್ಲಿ ಮಾತ್ರ ಅರ್ಹತಾ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.